ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಅರವಿಂದ ಕುಮಾರ ಅರಳಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 936

ಉತ್ತರಿಸಬೇಕಾದ ದಿನಾಂಕ : 21.12.2021

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ 2018–19 ರಿಂದ 2021–22 ರವರೆಗೆ ರೈತರ ಸಾಲ ಮನ್ನಾ ಮಾಡಲಾಗಿದೆಯೇ; ಮಾಡಿದ್ದಲ್ಲಿ, ತಾಲ್ಲೂಕುವಾರು ಮಾಹಿತಿ ನೀಡುವುದು;	ಬೀದರ್ ಜಿಲ್ಲೆಯ ಸಹಕಾರ ಸಂಘಗಳಲ್ಲಿ ರೈತರು ಬೆಳೆ ಸಾಲ ಪಡೆದು ದಿ:10.07.2018ಕ್ಕೆ ಹೊರಬಾಕಿ ಹೊಂದಿರುವ ಸಾಲದಲ್ಲಿ ಕುಟುಂಬಕ್ಕೆ ರೂ.1.00 ಲಕ್ಷಗಳವರೆಗಿನ ಸಾಲವನ್ನು 2018–19 ರಲ್ಲಿ ಮನ್ನಾ ಮಾಡಿದ್ದು, ಈ ಯೋಜನೆಯಲ್ಲಿ ರೈತರ ಅರ್ಹತೆಯನ್ನು 2018–19 ರಿಂದ 2021–22 ರವರೆಗೆ ಗುರುತಿಸಲಾಗುತ್ತಿದೆ. ಪ್ರತೀ ವರ್ಷ ಪಡೆದ ಬೆಳೆಸಾಲವನ್ನು ಮನ್ನಾ ಮಾಡಿರುವುದಿಲ್ಲ. 2018–19 ನೇ ಸಾಲಿನ ಸಾಲಮನ್ನಾದ ತಾಲ್ಲೂಕವಾರು ವಿವರ ಈ ಕೆಳಗಿನಂತಿರುತ್ತದೆ.

(ರೂ. ಕೋಟಿಗಳಲ್ಲಿ)

ಕ್ರ.ಸಂ	ತಾಲ್ಲೂಕು	ರೈತರ ಸಂಖ್ಯೆ	ಸಾಲ ಮನ್ನಾ ಮೊತ್ತ
1	ಔರಾದ್	22580	92.20
2	ಬಸವಕಲ್ಯಾಣ	20656	80.52
3	ಬಾಲ್ಕಿ	26451	110.58
4	ಬೀದರ್	16170	70.42
5	ಹುಮನಾಬಾದ್	17726	77.29
	ಒಟ್ಟು	1,03,583	431.00

ಕ್ರ.ಸಂ	ಪ್ರಶ್ನೆ	ಉತ್ತರ
ಆ)	2018–19 ರಿಂದ 2021–22 ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ವಿವಿಧ ಬ್ಯಾಂಕ್ ಗಳಲ್ಲಿ ರೈತರು ಎಷ್ಟು ಮೊತ್ತದ ಸಾಲ ಪಡೆದಿದ್ದಾರೆ; ಪಡೆದಿದ್ದಲ್ಲಿ, ಬ್ಯಾಂಕ್‌ವಾರು ವಿವರ ನೀಡುವುದು;	ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಮತ್ತು ಕಾಸ್ಕಾರ್ಡ್ ಬ್ಯಾಂಕ್ ಪಿಕಾರ್ಡ್ ಬ್ಯಾಂಕ್‌ಗಳ ಮೂಲಕ 2018–19 ರಿಂದ 2021–22 ನವೆಂಬರ್ ಅಂತ್ಯದ ವರೆಗೆ ವಿತರಿಸಿದ ಸಾಲದಲ್ಲಿ ರೈತರು ಪಡೆದಿರುವ ಕೃಷಿ ಸಾಲದ ವಿವರವನ್ನು ಈ ಕೆಳಗೆ ನೀಡಲಾಗಿದೆ.

(ರೂ. ಕೋಟಿಗಳಲ್ಲಿ)

ವರ್ಷ	ಡಿಸಿಸಿ ಬ್ಯಾಂಕಿನಿಂದ ನೀಡಿದ ಕೃಷಿ ಸಾಲದ ವಿವರ		ಕಾಸ್ಕಾರ್ಡ ಬ್ಯಾಂಕಿನಿಂದ ನೀಡಿದ ಸಾಲದ ವಿವರ	
	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
2018–19	152592	792.61	734	10.56
2019–20	140382	734.20	700	10.11
2020–21	155850	861.75	340	10.02
2021–22 (ನವೆಂಬರ್ ಅಂತ್ಯಕ್ಕೆ)	86636	362.41	0	0.00

ಇ)	ರೈತರ ಸಾಲ ಮನ್ನಾ ಮಾಡಲು ಸರ್ಕಾರದ ನಿಯಮವೇನು; ಯಾವ ಯಾವ ಬೆಳೆಗಳಿಗೆ ಸಾಲ ಮನ್ನಾ ಮಾಡಲಾಗಿದೆ ?	ಸಹಕಾರ ಸಂಘಗಳಲ್ಲಿ ರೈತರು ಬೆಳೆ ಸಾಲ ಪಡೆದು ದಿ:10.07.2018 ಕ್ಕೆ ಹೊರಬಾಕಿ ಹೊಂದಿರುವ ಸಾಲದಲ್ಲಿ ಕುಟುಂಬಕ್ಕೆ ರೂ.1.00 ಲಕ್ಷಗಳ ವರೆಗಿನ ಸಾಲವನ್ನು ಮನ್ನಾ ಲಾಭ ಪಡೆಯಲು 2018-19 ರಲ್ಲಿ ಈ ಕೆಳಕಂಡ ನಿಯಮಗಳನ್ನು ನಿಗದಿಪಡಿಸಲಾಗಿದೆ. 1. ದಿ:10.07.2018ಕ್ಕೆ ಸಹಕಾರ ಸಂಘಗಳಲ್ಲಿ ರೈತರು ಬೆಳೆ ಸಾಲದ ಹೊರಬಾಕಿಯನ್ನು ಹೊಂದಿರಬೇಕು. ಒಂದು ಕುಟುಂಬಕ್ಕೆ ಗರಿಷ್ಟ ರೂ.1.00 ಲಕ್ಷದವರೆವಿಗೆ ಮನ್ನಾ ದೊರೆಯುತ್ತದೆ. 2. ಈ ಯೋಜನೆ ಕೆಳಕಂಡವರಿಗೆ ಅನ್ವಯವಾಗುವುದಿಲ್ಲ. ರೂ.20,000 ಹೆಚ್ಚಿನ ವೇತನ/ಪಿಂಚಣಿ ಪಡೆಯುವ ನೌಕರರಿಗೆ ಕಳೆದ ಮೂರು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ಆದಾಯ ತೆರಿಗೆ ಪಾವತಿಸಿದಲ್ಲಿ 3. ದಿ.10-7-2018 ಕ್ಕೆ ಹೊರಬಾಕಿ ಚಾಲ್ತಿ ಇದ್ದಲ್ಲಿ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ಗಡುವಿನ ದಿನಾಂಕದೊಳಗೆ ಮರುಪಾವತಿಸತಕ್ಕದ್ದು. 4. ಒಬ್ಬ ರೈತನಿಗೆ ಒಂದು ಸಹಕಾರ ಸಂಘದಲ್ಲಿನ ಬೆಳೆ ಸಾಲ ಮಾತ್ರ ಮನ್ನಾ ಆಗುವುದು. 5. ದಿ:10-7-2018 ಕ್ಕೆ ಹೊರಬಾಕಿ ಸುಸ್ತಿ ಇದ್ದಲ್ಲಿ ಸುಸ್ತಿ ಸಾಲದ ಮರುಪಾವತಿ ದಿನಾಂಕದವರೆಗಿನ ಸಂಪೂರ್ಣ ಬಡ್ಡಿಯನ್ನು ಹಾಗೂ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಅಸಲನ್ನು ದಿನಾಂಕ:31.07.2019 ರೊಳಗೆ ಪಾವತಿಸತಕ್ಕದ್ದು. ರೈತನು ಭೂ ಮಾಲೀಕನಾಗಿದ್ದು ಬೆಳೆಯುವ/ಪಹಣಿಯಲ್ಲಿ ನಮುದಾಗಿರುವ ಎಲ್ಲಾ ಬಗೆಯ ಬೆಳೆಗಳಿಗೂ ಸಹ ಸಾಲ ಮನ್ನಾ ಮಾಡಲಾಗಿದೆ.

ಸಂಖ್ಯೆ: ಸಿಒ 376 ಸಿಎಲ್ಎಸ್ 2021

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು